ಅ) ಗುರುತಿಸಲಾದ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಗೊಳಿಸಲು ಹಂತ ಹಂತವಾಗಿ ಕಾರ್ಯವನ್ನು ಅಂದರೆ ಪ್ರವಾಸಿ ಸೌಲಭ್ಯಗಳಾದ ಯಾತ್ರಿ ನಿವಾಸ, ಯಾತ್ರಿಕಾ, ರಸ್ತೆಬದಿ ಸೌಲಭ್ಯ ಮತ್ತು ಕುಡಿಯುವ ನೀರಿನ ಸೌಲಭ್ಯ ಇತ್ಯಾದಿಗಳನ್ನು ನಿರ್ಮಿಸಿ ಪ್ರವಾಸಿಗರಿಗೆ ಒದಗಿಸಲಾಗುತ್ತಿದೆ.

ಇ) ಹೌದು.

ಈ) ಪ್ರವಾಸೋದ್ಯಮ ಇಲಾಖೆಗೆ ರಾಜ್ಯ ಮತ್ತು ಕೇಂದ್ರದಿಂದ ಇದುವರೆಗೂ ಬಂದಿರುವ ಅನುದಾನವು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ವರ್ಷ	ಕೇಂದ್ರ	ರಾಜ್ಯ
2000-2001	1425.00	150.57
2002-2003	2090-51	118.55

ಕೊಪ್ಪಳ ಜಿಲ್ಲೆಯಲ್ಲಿ ಜಿಲ್ಲಾ ಸಂಕೀರ್ಣ ಯೋಜನೆ

217 (663) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) ಮಾನ್ಯ ಕಂದಾಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸ ಜಿಲ್ಲೆಗಳಿಗೆ ಜಿಲ್ಲಾ ಸಂಕೀರ್ಣ ಯೋಜನೆ ಜಾರಿಯಲ್ಲಿದೆ, ಇದ್ದರೆ, ಯಾವ ಸಂಸ್ಥೆಯಿಂದ ನೆರವು ಪಡೆದುಕೊಳ್ಳಲಾಗಿದೆ, ಪಡೆದುಕೊಂಡಿದ್ದರೆ ಕೊಪ್ಪಳದಲ್ಲಿ ಜಿಲ್ಲಾ ಸಂಕೀರ್ಣದ ಕಟ್ಟಡ ಕೆಲಸ ಪ್ರಾರಂಭವಾಗುವುದೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಹೊಸ ಜಿಲ್ಲೆಗಳಿಗೆ ಜಿಲ್ಲಾ ಕಛೇರಿಗಳ ಸಂಕೀರ್ಣ ನಿರ್ಮಾಣ ಯೋಜನೆ ಜಾರಿಯಲ್ಲಿದೆ. ಇದಕ್ಕಾಗಿ ಹುಡ್ಕೊ ಸಂಸ್ಥೆಯಿಂದ ಸಾಲದ ಸಹಾಯ ಪಡೆದುಕೊಳ್ಳಲಾಗಿದೆ. ಕೊಪ್ಪಳದಲ್ಲಿ ಡಿಲ್ಲಾ ಕಛೇರಿಗಳ ಸಂಕೀರ್ಣದ ಕಟ್ಟಡ ಕೆಲಸ ಶೀಘ್ರದಲ್ಲಿಯೇ ಪ್ರಾರಂಭವಾಗುವುದು.

ಬೈಲಹೊಂಗಲ ನಗರದಲ್ಲಿ ಕೇಂದ್ರ ಸರ್ಕಾರದ ನೆರವಿನಿಂದ ಈಜು ಕೊಳ ಕಟ್ಟುವುದು

219 (509) ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಈಜು ಕೊಳ ಕಟ್ಟುವ ಸಲುವಾಗಿ ಬೆಳಗಾವಿಯ ಯುವಜನ ಸೇವಾ ಇಲಾಖೆಯವರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ ಸಂಗತಿ ನಿಜವೇ?

ಆ) ಈ ಕೆಲಸಕ್ಕೆ ಬೇಕಾಗುವ ಅಂದಾಜು ಮೊತ್ತ ಎಷ್ಟು?

ಇ) ಕೇಂದ್ರ ಸರ್ಕಾರದ ನೆರವಿನಿಂದ ಬೈಲಹೊಂಗಲ ನಗರದಲ್ಲಿ ಈಜು ಕೊಳ ಕಟ್ಟಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಹೌದು.

ಆ) ರೂ. 50.00 ಲಕ್ಷಗಳು.

ಇ) ಪ್ರಸ್ತಾವವು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ತಾಲ್ಲೂಕ ಮಟ್ಟದ ಕ್ರೀಡಾಂಗಣಗಳ ನಿರ್ಮಾಣ

220 (510) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕು ಮಟ್ಟದ ಕ್ರೀಡಾಂಗಣವನ್ನು ರಚಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡವುದು)

ಆ) ಇದರಲ್ಲಿ ಪೂರ್ಣಗೊಂಡ ಮತ್ತು ಅಪೂರ್ಣಗೊಂಡ ಕಾಮಗಾರಿಗಳಾವುವು?

ಇ) ಕ್ರೀಡಾಂಗಣಗಳ ನಿರ್ಮಾಣಕ್ಕೆ ಈವರೆಗೂ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕ್ರೀಡಾಂಗಣಗಳಿಗೆ ಮಂಜೂರಾತಿ ನೀಡಲಾಗಿದೆ? ಎಷ್ಟು ಪ್ರಗತಿಯಲ್ಲಿದೆ?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ ಒಟ್ಟು ಆರು (6) ತಾಲ್ಲೂಕು ಕ್ರೀಡಾಂಗಣಗಳನ್ನು ಪೂರ್ಣಗೊಳಿಸಲಾಗಿದೆ. ಮತ್ತು 87 ತಾಲ್ಲೂಕು ಕ್ರೀಡಾಂಗಣಗಳು ಅಪೂರ್ಣವಾಗಿದ್ದು ಅವುಗಳು ನಿರ್ಮಾಣದ ವಿವಿಧ ಹಂತದಲ್ಲಿವೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ).

ಆ) - " -

ಇ) ಅಪೂರ್ಣಗೊಂಡ 87 ತಾಲ್ಲೂಕು ಕ್ರೀಡಾಗಂಣ ನಿರ್ಮಾಣಕ್ಕೆ ಇಲ್ಲಿಯವರೆಗೂ ಒಟ್ಟು 1648 ಲಕ್ಷ ರೂ. ಗಳನ್ನು ವೆಚ್ಚ ಮಾಡಲಾಗಿದೆ. ಪೂರ್ಣಗೊಂಡ 6 ತಾಲ್ಲೂಕು ಕ್ರೀಡಾಂಗಣಗಳಿಗೆ ರೂ. 105.00 ಲಕ್ಷ ವೆಚ್ಚ ಮಾಡಲಾಗಿದೆ.

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 4 ತಾಲ್ಲೂಕು ಕ್ರೀಡಾಂಗಣಗಳಿಗೆ ಮಂಜೂರಾತಿ ನೀಡಿದೆ. ಇವುಗಳಲ್ಲಿ ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿಗಳಲ್ಲಿ ಕ್ರೀಡಾಂಗಣ ನಿರ್ಮಾಣ ಪ್ರಗತಿಯಲ್ಲಿದೆ. ಬಂಟವಾಳದಲ್ಲಿ ಕ್ರೀಡಾಂಗಣ ನಿವೇಶನದ ವಿವಾದವಿರುವುದರಿಂದ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ.